ರಾಜ್ಯದಲ್ಲಿ ಸಕ್ಕರೆ ಅಭಿವೃದ್ಧಿ ನಿಧಿಯಿಂದ ರೈತರಿಗೆ ನೆರವು

3056 (3581) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 'ಸಕ್ಕರೆ ಅಭಿವೃದ್ಧಿ ನಿಧಿ' ಸ್ಥಾಪಿಸಲಾಗುತ್ತಿದೆಯೇ?

ಆ) ಈ ನಿಧಿಗೆ ಸಂಪನ್ಮೂಲ ಕ್ರೋಢೀಕರಣದ ಮೂಲಗಳೇನು ಹಾಗೂ ಈ ನಿಧಿಯ ಸ್ಥಾಪನೆಯ ಉದ್ದೇಶಗಳೇನು?

ಇ) ಈ ನಿಧಿಯಿಂದಾಗಿ ರೈತರಿಗೆ (ಕಬ್ಬು ಬೆಳೆಗಾರರಿಗೆ) ಯಾವ ರೀತಿಯಲ್ಲಿ ನೆರವು ಸಿಗುತ್ತದೆ?

ಶ್ರೀ ಎಂ. ಮಹಾದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು):

ಅ) ಹೌದು. ಇಂತಹ ಒಂದು ನಿಧಿಯನ್ನು ಸ್ಥಾಪಿಸಲು ಯೋಜಿಸಲಾಗಿದೆ. ಈ ಸಂಬಂಧ ಕರಡು ರೂಪು ರೇಷೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಸ್ಥಾಪಿಸಲು ಉದ್ದೇಶಿಸಿರುವ 'ಕರ್ನಾಟಕ ಸಕ್ಕರೆ ಅಭಿವೃದ್ಧಿ ನಿಧಿಗೆ ಸರ್ಕಾರದ ವತಿಯಿಂದ ಮೂಲ ಧನ ರೂಪದಲ್ಲಿ ರೂ. 25.00 ಕೋಟಿ ಪಡೆದು, ಅದರಂತೆ ಮುಂದೆ ಈ ನಿಧಿಗೆ ಕಬ್ಬು ಬೆಳೆಗಾರರಿಂದ, ಕಾರ್ಖಾನೆವತಿಯಿಂದ ಹಾಗೂ ಸರ್ಕಾರದ ವತಿಯಿಂದ ಪ್ರತಿ ಟನ್ ಕಬ್ಬು ನುರುಸುವಿಕೆಗೆ ತಲಾ ರೂ. 5.00 ರಂತೆ ಸಂಗ್ರಹಿಸಲು ಯೋಜಿಸಲಾಗಿದೆ.

ಸಕ್ಕರೆ ಅಭಿವೃದ್ಧಿ ನಿಧಿ ಸ್ಥಾಪನೆಯ ಉದ್ದೇಶಗಳು ಈ ಕೆಳಕಂಡಂತಿವೆ:-

1. ಯಂತ್ರೋಪಕರಣಗಳನ್ನು ಮೇಲ್ದರ್ಜೆಗೆ ಏರಿಸುವುದು.
2. ಮಳೆ ನೀರಿನ ಸಂಗ್ರಹಣೆ ಮತ್ತು ಸದ್ಬಳಕೆ.
3. ಸಕ್ಕರೆ ಗುಣಮಟ್ಟ ಸುಧಾರಣೆ
4. ಸಕ್ಕರೆ ಕಾರ್ಖಾನೆಗಳಲ್ಲಿನ ಹೆಚ್ಚುವರಿ ಸಿಬ್ಬಂದಿಯನ್ನು ಕಡಿತಗೊಳಿಸಿ ಸ್ವಯಂ ನಿವೃತ್ತಿ ಯೋಜನೆ ಜಾರಿಗೆ ತರುವುದು.
5. ಉಪ ಉತ್ಪನ್ನಗಳ ಕಾರ್ಯ ಚಟುವಟಿಕೆಗಳು (ಸಹ-ವಿದ್ಯುತ್ ಮತ್ತು ಎಡನಾಲ್ ಹೊರತುಪಡಿಸಿ)
6. ಪರಿಸರ ಸಂಬಂಧಿ ಯೋಜನೆಗಳು
7. ತಾಂತ್ರಿಕ-ಆರ್ಥಿಕ ಅಧ್ಯಯನ.

ಇ) ಸಕ್ಕರೆ ಕಾರ್ಖಾನೆಗಳ ಅಭಿವೃದ್ಧಿ ಯೋಜನೆಗಳಿಗಾಗಿ ಆರ್ಥಿಕ ನೆರವು ನೀಡಿದ ಉದ್ದೇಶದಿಂದ ಮತ್ತು ಅವಶ್ಯವಿರುವ ಸಕ್ಕರೆ ಕಾರ್ಖಾನೆಗಳ ಭಾಗ ರೈತರ ಕಬ್ಬಿನ ಬಿಲ್ಲನ್ನು ಪಾವತಿಸಲು ಅನುಕೂಲವಾಗುವಂತೆ ಈ ನಿಧಿಯಿಂದ ಆರ್ಥಿಕ ನೆರವು ನೀಡಲು ಉದ್ದೇಶಿಸಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ರೇಷ್ಮೆ ಬೆಳೆ ಅಭಿವೃದ್ಧಿ

3057 (3582) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ರೇಷ್ಮೆ ಬೆಳೆ ಬೆಳೆಯುತ್ತಿರುವ ಒಟ್ಟು ಪ್ರದೇಶವೆಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಕಳೆದೆರಡು ಸಾಲಿನಲ್ಲಿ ಉತ್ಪಾದನೆಯಾಗಿರುವ ಒಟ್ಟು ರೇಷ್ಮೆ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಇ) ಮಂಡ್ಯ ಜಿಲ್ಲೆಯಲ್ಲಿ ರೇಷ್ಮೆ ಬೆಳೆಯುವುದನ್ನು ಪ್ರೋತ್ಸಾಹಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಮಂಡ್ಯ ಜಿಲ್ಲೆಯಲ್ಲಿ 8882 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆ ಇದ್ದು ತಾಲ್ಲೂಕುವಾರು ವಿವರ ಕೆಳಗಿನಂತಿದೆ:–

ಮಂಡ್ಯ	738
ಮದ್ದೂರು	3099
ಮಳವಳ್ಳಿ	4250
ಶ್ರೀರಂಗಪಟ್ಟಣ	283
ಪಾಂಡವಪುರ	243
ನಾಗಮಂಗಲ	63
ಕೆ.ಆರ್. ಪೇಟೆ	206
ಒಟ್ಟು	**8882**

ಆ) ತಾಲ್ಲೂಕುವಾರು ರೇಷ್ಮೆ ಉತ್ಪಾದನಾ ವಿವರ ಈ ಕೆಳಕಂಡಂತಿದೆ:

ಕ್ರ.ಸಂ.	ತಾಲ್ಲೂಕು	2001–02	2002–03
1	ಮಂಡ್ಯ	78	74
2	ಮದ್ದೂರು	365	318
3	ಮಳವಳ್ಳಿ	373	299
4	ಶ್ರೀರಂಗಪಟ್ಟಣ	23	20
5	ಪಾಂಡವಪುರ	24	28
6	ನಾಗಮಂಗಲ	06	05
7	ಕೆ.ಆರ್.ಪೇಟೆ	10	08
	ಒಟ್ಟು	**879**	**752**

ಇ) ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ:

1. ಹೊಸದಾಗಿ ರೇಷ್ಮೆ ಕೃಷಿ ಪ್ರಾರಂಭಿಸುವ ರೈತರಿಗೆ ಹಾಗೂ ಹಾಲಿ ರೇಷ್ಮೆ ಕೃಷಿ ಕೈಗೊಂಡಿರುವವರಿಗೆ ಪಾತ್ಯಕ್ಷತೆಯೊಂದಿಗೆ ತಾಂತ್ರಿಕ ತರಬೇತಿಯನ್ನು ಶಿಷ್ಯವೇತನ ನೀಡುವುದು.

2. ನೀರಿನ ಸಮರ್ಪಕ ಬಳಕೆಗಾಗಿ ಹನಿ ನೀರಾವರಿ ಅಳವಡಿಸಲು ಸಹಾಯಧನ ನೀಡುವುದು.

3. ಪ್ರತ್ಯೇಕ ರೇಷ್ಮೆ ಹುಳು ಸಾಕಾಣೆ ಮನೆ ನಿರ್ಮಾಣಕ್ಕಾಗಿ ಸಾಲ ಸೌಲಭ್ಯ ಹಾಗೂ ಸಹಾಯಧನ ನೀಡುವುದು.

4. ರೇಷ್ಮೆ ಬೆಳೆಗಾರರಿಗೆ ಸೋಂಕುನಿವಾರಕಗಳನ್ನು ಸರಬರಾಜು ಮಾಡುವುದು.

5. ಬಿತ್ತನೇತರ ಪ್ರದೇಶಗಳಲ್ಲಿ ಉತ್ಪಾದಿಸುವ ಪ್ರತಿ ಕೆ.ಜಿ ದ್ವಿತಳಿಗೂಡಿಗೆ (ಸಿ.ಎಸ್.ಆರ್. ಗೂಡುಗಳನ್ನು ಹೊರತುಪಡಿಸಿ) ರೂ. 10–00 ರ ಪ್ರೋತ್ಸಾಹಧನ ನೀಡುವುದು.

6. ಕೆ.ಆರ್. ಪೇಟೆ ಬಿತ್ತನೆ ಪ್ರದೇಶದಲ್ಲಿ ಉತ್ಪಾದಿಸಿ ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ವಿಲೇವಾರಿಯಾಗು ದ್ವಿತಳಿ ಬಿತ್ತನೆ ಗೂಡಿಗೆ ಬಿತ್ತನೆ ದರ ನೀಡುವುದು.

7. ಬೆವೊಲ್ಟೀನ್ ಅಭಿವೃದ್ಧಿಗಾಗಿ 3 ತಾಂತ್ರಿಕ ಸೇವಾ ಕೇಂದ್ರಗಳು, 2 ರೇಷ್ಮೆ ಕೃಷಿ ಕ್ಷೇತ್ರಗಳು, 1 ಮಾದರಿ ಬಿತ್ತನೆ ಕೋಠಿ ಮತ್ತು 1 ತರಬೇತಿ ಶಾಲೆಯನ್ನು ಬಲಪಡಿಸುವುದು.

8. ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ರೇಷ್ಮೆ ಬೆಳೆಗಾರರಿಗೆ ಸಾಲ ಸೌಲಭ್ಯ / ಸಹಾಯಧನ ನೀಡುವುದು.

9. ನೂತನ ತಾಂತ್ರಿಕತೆಗಳ ಅಳವಡಿಕೆಯನ್ನು ಪ್ರೋತ್ಸಾಹಿಸಲು ಕ್ಷೇತ್ರೋತ್ಸವಗಳು ಕಾರ್ಯಾಗಾರ, ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು.

10. ಸಂಶೋಧನಾಲಯಗಳಲ್ಲಿ ಅಭಿವೃದ್ಧಿಪಡಿಸಿದ ಅಧಿಕ ಇಳುವರಿ ನೀಡುವ ಸುಧಾರಿತ ಹಿಪ್ಪನೇರಳೆ ಹಾಗೂ ರೇಷ್ಮೆ ಹುಳುವಿನ ತಳಿಗಳನ್ನು ರೈತರಿಗೆ ಒದಗಿಸುವುದು.

ಹುಬ್ಬಳ್ಳಿ–ಧಾರವಾಡದಲ್ಲಿ ಭಾರೀ ಉದ್ಯಮಗಳ ಸ್ಥಾಪನೆ

3060 (3608) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಬೃಹತ್ ಮತ್ತು ಮಾಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರದ ಗೋಕುಲ, ತಾರೀಹಾಳ್ ಮತ್ತು ಬೇಲೂರು ಉದ್ದಿಮೆ ಪ್ರದೇಶದಲ್ಲಿ ಎಷ್ಟು ಭಾರೀ ಮತ್ತು ಮಧ್ಯಮ ಕೈಗಾರಿಕೆಗಳು ನಡೆಯುತ್ತಿವೆ;

ಆ) ಈ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು; ಮತ್ತು ಇದರಲ್ಲಿ ತೊಡಗಿಸಿರುವ ಬಂಡವಾಳ ಎಷ್ಟು;

ಇ) ಹುಬ್ಬಳ್ಳಿ–ಧಾರವಾಡ ಪ್ರದೇಶದಲ್ಲಿ ಮುಂದೆ ಅವಕಾಶ ಇರುವ ಕೈಗಾರಿಕೆಗಳ ವಿವರ ನೀಡುವುದು;

ಈ) ಬೆಂಗಳೂರು ನಗರವನ್ನು ಬಿಟ್ಟು ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಭಾರೀ ಮತ್ತು ಮಧ್ಯಮ ಕೈಗಾರಿಕಾ ಸ್ಥಾಪನೆ ಮಾಡಲು ಸರ್ಕಾರ ಯಾವ ಯೋಜನೆ ಹಾಕಿಕೊಂಡಿದೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಹುಬ್ಬಳ್ಳಿ–ಧಾರವಾಡ ಮಹಾನಗರದ ಗೋಕುಲ, ತಾರೀಹಾಳ ಮತ್ತು ಬೇಲೂರು ಉದ್ದಿಮೆ ಪ್ರದೇಶದಲ್ಲಿ 16 ಭಾರೀ ಮತ್ತು ಮಧ್ಯಮ ಕೈಗಾರಿಕೆಗಳು ಇರುತ್ತವೆ.

ಆ) ಈ ಉದ್ದಿಮೆಗಳಲ್ಲಿ 4007 ಜನರು ಉದ್ಯೋಗ ಮಾಡುತ್ತಿದ್ದು, ರೂ. 273.57 ಕೋಟಿಗಳ ಬಂಡವಾಳ ಹೂಡಿಕೆಯಾಗಿದೆ.

ಇ) ಹೊಸ ಕೈಗಾರಿಕಾ ನೀತಿಯ ಪ್ರಕಾರ ಹುಬ್ಬಳ್ಳಿ ಧಾರವಾಡ ಪ್ರದೇಶಗಳನ್ನು ವಲಯ "ಬಿ" ಎಂದು ವರ್ಗೀಕರಿಸಲಾಗಿದೆ. ಹಾಗೂ ಉತ್ತೇಜನ ಮತ್ತು ರಿಯಾಯಿತಿಗಳನ್ನು ಯಾವುದೇ ಕೈಗಾರಿಕೆಗಳಿಗೆ ನೀಡಲಾಗುವುದು.

ಈ) ಹೊಸ ಕೈಗಾರಿಕಾ ನೀತಿಯ ಪ್ರಕಾರ ಬೆಂಗಳೂರು ಜಿಲ್ಲೆಯನ್ನು ಬಿಟ್ಟು ಎಲ್ಲಾ ಜಿಲ್ಲೆಗಳನ್ನು ವಲಯ "ಬಿ,ಸಿ, ಮತ್ತು ಡಿ" ಎಂದು ವರ್ಗೀಕರಿಸಲಾಗಿದ್ದು ಉತ್ತೇಜನ ಮತ್ತು ರಿಯಾಯಿತಿಗಳನ್ನು ಈ ವಲಯಗಳಿಗೆ ನೀಡಲಾಗಿದೆ.